ಉಪಾಧ್ಯಕ್ಷಿಣಿಯವರು : ಕಾಗದ ಪತ್ರಗಳನ್ನು ಮಂಡಿಸಲಾಯಿತು.

ಪ್ರಕಟಣೆ

ಉಪಾಧ್ಯಕ್ಷರು : ಈಗ ಒಂದು ಪ್ರಕಟಣೆ. ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿದೆ.

"1990ನೇ ಇಸವಿಯ ಹಿಂದೂ ಉತ್ತರಾಧಿಕಾರ (ಕರ್ನಾಟಕ ತಿದ್ದುಪಡಿ) ವಿಧೇಯಕವನ್ನು ಜಂಟಿ ಪರಿಶೀಲನಾ ಸಮಿತಿಗೆ ಒಪ್ಪಿಸಲಾಗಿರುವ ಪ್ರಸ್ತಾವಕ್ಕೆ" ಅನುಮೋದನೆಯನ್ನು ವಿಧಾನ ಪರಿಷತ್ತು ನೀಡಲಾಗಿದೆ ಹಾಗೂ ಈ ಕೆಳಕಂಡ ವಿಧಾನ ಪರಿಷತ್ತಿನ ಸದಸ್ಯರನ್ನು ಜಂಟಿ ಪರಿಶೀಲನಾ ಸಮಿತಿಯ ಸದಸ್ಯರಾಗಿ ನಾಮ ನಿರ್ದೇಶನ ಮಾಡಲಾಗಿದೆ ಎಂದು ತಿಳಿಸುತ್ತೇನೆ.

ಶ್ರೀಯುತರುಗಳಾದ

1. ಶ್ರೀಮತಿ ಬಿಂಬಾ ರಾಯ್ಕರ್
2. ಎನ್. ತಿಪ್ಪಣ್ಣ
3. ಕೆ.ಬಿ. ಮಲ್ಲಿಕಾರ್ಜುನ
4. ಡಿ.ಹೆಚ್. ಶಂಕರಮೂರ್ತಿ

ಅರ್ಜಿಗಳನ್ನೊಪ್ಪಿಸುವುದು

ಶ್ರೀಮತಿ ಮೋಟಮ್ಮ : ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ಚಿಕ್ಕಮಗಳೂರು ಜಿಲ್ಲೆ, ಮೂಡಿಗೆರೆ ತಾಲ್ಲೂಕಿನ ದರದಹಳ್ಳಿ ಹತ್ತಿರ ಹೇಮಾವತಿ ನದಿಗೆ ಅಡ್ಡವಾಗಿ ಕಾಲು ಸೇತುವೆ ಕಟ್ಟುವ ಬಗ್ಗೆ ಅರ್ಜಿಯನ್ನು ಸಭೆಯ ಮುಂದೆ ಒಪ್ಪಿಸುತ್ತಿದ್ದೇನೆ.

ಉಪಾಧ್ಯಕ್ಷರು : ಅರ್ಜಿಗಳನ್ನೊಪ್ಪಿಸಲಾಯಿತು.

ಶ್ರೀ ಶ್ರೀರಂಗದೇವರಾಯುಲು : (ಸದಸ್ಯರು ಗೈರುಹಾಜರು)

ಚುನಾವಣಾ ಪ್ರಸ್ತಾವಗಳು

ಶ್ರೀ ಎಂ. ವೀರಪ್ಪಮೊಯಿಲಿ : (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿ) ಸನ್ಮಾನ್ಯ ಉಪಾಧ್ಯಕ್ಷಿಣಿಯವರೇ,

1976ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಶಾಸನದ 47ನೇ ಕಲಮಿನ ಮೇರೆಗೆ ಅವಶ್ಯಪಡಿಸಿರುವಂತೆ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆಯು ಮೈಸೂರು ವಿಶ್ವವಿದ್ಯಾನಿಲಯದ ತೆರವಾದ ಸೆನೆಟ್ ಸ್ಥಾನಕ್ಕೆ ಒಬ್ಬ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

1976ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಶಾಸನದ 47ನೇ ಕಲಮಿನ ಮೇರೆಗೆ ಅವಶ್ಯಪಡಿಸಿರುವಂತೆ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆಯು ಮಂಗಳೂರು ವಿಶ್ವವಿದ್ಯಾನಿಲಯದ ತೆರವಾದ ಸೆನೆಟ್ ಸ್ಥಾನಕ್ಕೆ ಒಬ್ಬ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುತ್ತೇನೆ.

ಉಪಸಭಾಧ್ಯಕ್ಷಿಣಿಯವರು : ಪ್ರಸ್ತಾವ ಏನೆಂದರೆ,

1976ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಶಾಸನದ 47ನೇ ಕಲಮಿನ ಮೇರೆಗೆ ಅವಶ್ಯಪಡಿಸಿರುವಂತೆ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆಯು ಮೈಸೂರು ವಿಶ್ವವಿದ್ಯಾನಿಲಯದ ತೆರವಾದ ಸೆನೆಟ್ ಸ್ಥಾನಕ್ಕೆ ಒಬ್ಬ ಸದಸ್ಯರನ್ನು ಚುನಾಯಿಸಬೇಕು.

1976ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಶಾಸನದ 47ನೇ ಕಲಮಿನ ಮೇರೆಗೆ ಅವಶ್ಯಪಡಿಸಿರುವಂತೆ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆಯು ಮಂಗಳೂರು ವಿಶ್ವವಿದ್ಯಾನಿಲಯದ ತೆರವಾದ ಸೆನೆಟ್ ಸ್ಥಾನಕ್ಕೆ ಒಬ್ಬ ಸದಸ್ಯರನ್ನು ಚುನಾಯಿಸಬೇಕು.

ಪ್ರಸ್ತಾವಕ್ಕೆ ಅನುಮೋದನೆ ದೊರಕಿತು

ಗಮನ ಸೆಳೆಯುವ ಸೂಚನೆಗಳು

(1) ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕು ಹಾಗೂ ಚಿಕ್ಕಮಂಗಳೂರಿನ ಮೂಡಿಗೆರೆ ತಾಲ್ಲೂಕಿನಲ್ಲಿ ಆನೆಗಳ ಹಾವಳಿಯಿಂದ ರೈತರುಗಳಿಗೆ ತೊಂದರೆಯಾಗಿರುವ ವಿಚಾರ

ಶ್ರೀ ಟಿ. ಎಂ. ಮಂಜುನಾಥ್: ಸನ್ಮಾನ್ಯ ಉಪಾಧ್ಯಕ್ಷೆಣಿಯವರೆ, ನಂಜನಗೂಡು ತಾಲ್ಲೂಕು ಅರಣ್ಯ ಪ್ರದೇಶದ ಹತ್ತಿರವಿರುವ ಗ್ರಾಮಗಳಾದ ಕೊತ್ತನಹಳ್ಳಿ, ಒಡೆಯನಪುರ, ಅಂಚೇಪುರ, ನಾಗನಾಪುರ, ಬೆಳ್ಳುವುಂಡಿ, ನೀಲೆಗೌಡನವುಂಡಿ, ಬಸವೀದು, ಅಂಜನಾಪುರ, ಯಡಿಯಾಲ ಬಸವನಹಳ್ಳಿ, ಬಂಕಳ್ಳಿ, ಮಲ್ಲಹಳ್ಳಿ ಮತ್ತು ಇತರೆ ಗ್ರಾಮಗಳಲ್ಲಿ ವಾಸಿಸುವ ಜನರಿಗೆ ಕಾಡಾನೆಗಳ ಕಾಟದಿಂದ, ತುಂಬಾ ತೊಂದರೆಯಾಗಿ ಬೆಳೆದ ಫಸಲನ್ನು ತಿಂದು ಹಾಳುಮಾಡಿತ್ತಿವೆ ಹಾಗೂ ತೆಂಗಿನ ಸಸಿಗಳನ್ನು ಕಿತ್ತುಹಾಕಿ ತೋಟವನ್ನು ಹಾಳುಮಾಡುತ್ತಿವೆ, ಆದುದರಿಂದ ಕಾಡಾನೆ ಹಾವಳಿಯನ್ನು ತಡೆದು ಜೀವಹಾನಿ ಮತ್ತು ಫಸಲು ನಷ್ಟ ತಪ್ಪಿಸಿ ಪರಿಹಾರ ನೀಡಿ ಸೂಕ್ತ ಕ್ರಮ ಕೈಗೊಳ್ಳುವ ಬಗ್ಗೆ ಅರಣ್ಯ ರಾಜ್ಯ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಇ.ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು) :– ಮಾನ್ಯ ಉಪಾಧ್ಯಕ್ಷೆಣಿಯವರೆ, ಶ್ರೀಯುತರುಗಳಾದಂಥ ಎಂ. ಮಹದೇವ್, ಶ್ರೀಮತಿ ಮೋಟಮ್ಮ, ಮತ್ತು ಶ್ರೀ ಸಿ.ಆರ್. ಸಗೀರ್ ಅಹಮದ್ ಇವರುಗಳು ಮಂಡಿಸಿದ ಗಮನ ಸೆಳೆಯುವ ಸೂಚನೆಗೆ ಈ ಕೆಳಕಂಡಂತೆ ಉತ್ತರವನ್ನು ನೀಡುತ್ತಿದ್ದೇನೆ.

ಚಿಕ್ಕಮಗಳೂರು ಜಿಲ್ಲೆ, ಮೂಡಿಗೆರೆ ತಾಲ್ಲೂಕಿನಲ್ಲಿ ದಿನಾಂಕ 22–11–90ರಂದು ಒಬ್ಬರು ಆನೆ ತುಳಿತಕ್ಕೆ ಸಿಕ್ಕಿ ಮೃತಪಟ್ಟ ಅವರಿಗೆ ತಾತ್ಕಾಲಿಕವಾಗಿ ರೂ. 5,000 ಗಳನ್ನು ಪರಿಹಾರ ಧನವಾಗಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ಚಿಕ್ಕಮಗಳೂರು, ಇವರು ಮಂಜೂರು ಮಾಡಿರುತ್ತಾರೆ. ನರಸಿಂಹರಾಜಪುರ ತಾಲ್ಲೂಕಿನಲ್ಲಿ ಆನೆಯ ಹಾವಳಿಯಿಂದ ಇತ್ತೀಚೆಗೆ ವರದಿಯಾದ ಮೂರು ಬೆಳೆ ನಾಶ ಪ್ರಕರಣಗಳಲ್ಲಿ ರೂ. 3050–00 ಗಳನ್ನು ಪರಿಹಾರ ಧನವಾಗಿ ಮಂಜೂರು ಮಾಡಲಾಗಿದೆ. ಕೊಪ್ಪ ತಾಲ್ಲೂಕಿನಲ್ಲಿ ಆನೆಯಿಂದ ಗಾಯಗೊಂಡ ಒಂದು ಪ್ರಕರಣ ವರದಿಯಾಗಿದ್ದು ಶ್ರೀ ಓ. ತಿಮ್ಮೇಗೌಡ ಎಂಬುವವರಿಗೆ ರೂ. 2,000 ಗಳನ್ನು ಪರಿಹಾರ ಧನವಾಗಿ ಮಂಜೂರು ಮಾಡಲಾಗಿದ್ದು ಆನೆಯ ಹಾವಳಿಯಿಂದ ಬೆಳೆ ನಾಶದ ಬಗ್ಗೆ ಯಾವುದೇ ದೂರುಗಳು ಬಂದಿಲ್ಲ. ಅಂತಹ ದೂರುಗಳು ಬಂದಲ್ಲಿ ಬೆಳೆಗಳಿಗೆ ಆದ ನಷ್ಟವನ್ನು ಪರಿಹಾರ ರೂಪದಲ್ಲಿ ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುವುದು. ಮೇಲ್ಕಂಡ ತಾಲ್ಲೂಕುಗಳಲ್ಲಿ ಆನೆಯ ಹಾವಳಿ ಹೆಚ್ಚಾಗಿರುವ ಪ್ರದೇಶಗಳಲ್ಲಿ ಟಿಮಟಿ ಬಾರಿಸಿ ಹುಸಿಗುಂಡು ಹಾರಿಸಿ ಆನೆಗಳನ್ನು ಕಾಡಿನೊಳಕ್ಕೆ ಓಡಿಸುವ ಕ್ರಮ ಕೈಗೊಳ್ಳಲಾಗಿದೆ. ನಂಜನಗೂಡು ತಾಲ್ಲೂಕಿನ ಹಲವು ಹಳ್ಳಿಗಳಲ್ಲಿ ಆನೆಗಳು ರೈತರ ಜಮೀನಿಗೆ ದಾಳಿ ಮಾಡಿ ಅವರ ಬೆಳೆಗಳನ್ನು ನಾಶ ಮಾಡಿರುವ ಹಲವು ಪ್ರಕರಣಗಳ ನೊಂದ ರೈತರಿಗೆ ಪರಿಹಾರ ಧನವನ್ನು ಮಂಜೂರು ಮಾಡಲಾಗಿದೆ. 1990–91ರ ಅವಧಿಯಲ್ಲಿ 45 ಬೆಳೆ ನಾಶದ ಪ್ರಕರಣಗಳು ವರದಿಯಾಗಿದ್ದು ಅವುಗಳಲ್ಲಿ 30 ಪ್ರಕರಣಗಳಲ್ಲಿ 18,175–00 ರೂ.ಗಳನ್ನು ಪರಿಹಾರ ಧನವಾಗಿ ಮಂಜೂರು ಮಾಡಲಾಗಿದ್ದು ಉಳಿದ ಪ್ರಕರಣಗಳನ್ನು ಪರಿಶೀಲಿಸಿ ನಿಯಮದಂತೆ ಪರಿಹಾರವನ್ನು ಶೀಘ್ರವೇ ಮಂಜೂರು ಮಾಡಲಾಗುವುದು. 1988–89ನೇ ಸಾಲಿನಲ್ಲಿ ಇಬ್ಬರು ಆನೆಯ ತುಳಿತಕ್ಕೆ ಸಿಕ್ಕಿ ಮೃತಪಟ್ಟಿರುವುದರಿಂದ ಅವರ ಕುಟುಂಬದವರಿಗೆ ತಲಾ 10,000–00 ರೂ.ಗಳನ್ನು ಪರಿಹಾರ ಧನವಾಗಿ ಮಂಜೂರು ಮಾಡಲಾಗಿದೆ. 1989–90ರಲ್ಲಿ ನಾಲ್ಕು ಪ್ರಕರಣಗಳು ನಂಜನಗೂಡಿನಲ್ಲಿ ನಡೆದಿದ್ದು 40,000 ರೂ.ಗಳನ್ನು ಪರಿಹಾರ ಧನವಾಗಿ ನೀಡಲಾಗಿದೆ. 1990–91ನೇ ಸಾಲಿನಲ್ಲಿ 22–10–90ರಂದು ಆನೆ ಹಾವಳಿಗೆ ತುತ್ತಾಗಿ ಮೃತಪಟ್ಟ ನಂಜನಗೂಡು ತಾಲ್ಲೂಕ್ ಕುಲ್ಲಹಳ್ಳಿ ಹೋಬಳಿ ಮಡುವಿನಲ್ಲಿ ಹುಚ್ಚಯ್ಯನ ಮಗ ಬಸವಯ್ಯನವರಿಗೆ 10 ಸಾವಿರ ರೂಪಾಯಿ ಪರಿಹಾರ ಧನವನ್ನು ಮಂಜೂರು ಮಾಡಲಾಗಿದೆ ಕಾಡಾನೆಗಳು ರೈತರ ಜಮೀನಿಗೆ ಬಂದಲ್ಲಿ ಅರಣ್ಯ ಸಿಬ್ಬಂದಿಯು ಸ್ಥಳೀಯ ಜನರ ಸಹಾಯದಿಂದ ಕಾಡಿನೊಳಕ್ಕೆ ಓಡಿಸಲಾಗುತ್ತಿದೆ.